

ಬಿಕ್ಕುತ್ತಾ ಅ....ಮ್ಮ ಎಂದು ರೋದಿಸುವ ಆಕ್ರಂದನವನ್ನು ಹಾಗೂ ಎದುರಿನ ಆನಂದ ಅದರ ಕಣ್ಣಲ್ಲಿ ತುಂಬಿದ್ದು ಅದನ್ನು ತಣ್ಣಗಾಗಿಸುವುದು ಕಷ್ಟವಿತ್ತು. ಈವರೆಗೆ ನಡೆದು ಬಂದ ದೂಳು ತುಂಬಿದ ದಾರಿಯನ್ನು ಬಿಟ್ಟು ಸುತ್ತು ಬಳಸಿ ಜುಗುಪ್ಸೆಯಲ್ಲಿ ಉತ್ತರದ ಕಡೆ ಹೆಜ್ಜೆ ಹಾಕಿ, ಒಂದು ಹೊಲದೊಳಗೆ ಹಾದು ಹೋಗುವ ಕಾಲುದಾರಿಗೆ ಅವರು ಪ್ರವೇಶಿಸಿದರು.

ಅದೊಂದು ಸಮೃದ್ಧ ಪುಷ್ಪಭರಿತ ಸಾಸಿವೆ ಹೊಲ. ನಿಸ್ತೇಜ, ನಿಸ್ತೇಜವಾಗಿತ್ತು. ಕರಗಿಸಿದ ಸ್ವರ್ಣದಂತೆ, ಮೈಲುಗಟ್ಟಲೆ ವಿಸ್ತೀರ್ಣದ ಸಮತಲ ಹೊಲದ ತುಂಬಾ ಹಳದಿ ವರ್ಣದ ನದಿಯ ಬೆಳಕು ಪಸರಿಸಿದ್ದು, ಪ್ರತಿಸಲ ಸುಳಿ ಎಬ್ಬಿಸಿ ಬೀಸುವ ಭೋರ್ಗರೆತದ ಮಾರುತದೊಂದಿಗೆ ಸಾಸಿವೆ ಹೊಲ ಏರಿಳಿತ ಕಾಣುತ್ತಾ ಕೆಲವೆಡೆ ವಿಶಾಲವೂ, ಭರ್ತಿಯೂ ಆದ ಹಳ್ಳಗಳು ತುಂಬಿ ಹರಿವ ಝರಿಗಳೊಂದಿಗೆ ಐಕ್ಯಗೊಂಡು ದೂರದ ಸೂರ್ಯಕಿರಣಗಳೊಂದಿಗೆ ಸೇರಿ ಬಿಸಿಲ್ಗುದುರೆಯ ಮಹಾಸಾಗರದಂತೆ ತೋರುತ್ತಿತ್ತು. ಎಲ್ಲದು ಅಂತ್ಯ ಕಂಡಿತೋ ಅಲ್ಲಿ ಒಂದು ಕಡೆ ಒತ್ತೊತ್ತಾದ ಅಷ್ಟೇನೂ ಎತ್ತರವಿಲ್ಲದ ಮಣ್ಣಿನ ಮನೆಗಳ ಎದುರು ಅಲ್ಲಿಯ ಮಾವಿನ ತೋಪಿನ ಉದ್ದಗಲಕ್ಕೂ ದಟ್ಟೈಸಿ ಜಮಾಯಿಸಿದ್ದ ದಟ್ಟ ಹಳದಿ ದಿರಿಸಿನ ಸ್ತ್ರೀ-ಪುರುಷರ ಸಮೂಹದಿಂದ ಎದ್ದ ಕೂಗು, ಕೇಕೆ, ಸಿಳ್ಳೆ, ಅರಚಾಟ, ಕಿರುಚಾಟದ ಮಾರ್ದನಿಯು ಅಪರಿಚಿತ ನೀಲಕಂಠನ ಹುಚ್ಚು ನಗುವಿನಂತಿತ್ತು.

ಮಗು ತನ್ನಪ್ಪ, ಅಮ್ಮನ ಕಡೆ ನೋಡಿತು. ಈ ಅಮೋಘ ಪ್ರಮೋದದ ಜಾತ್ರೆ ನೋಡಿ ತೃಪ್ತಿಗೊಂಡ ಅದು ತನ್ನ ಪೋಷಕರ ವದನ ಕೂಡ ತನ್ನಂತೆಯೇ ಆನಂದ ತುಂದಿಲರಾಗಿರುವರೆಂಬುದಕ್ಕೆ ಸಾಕ್ಷಿಯಾಗಿದೆ ಎಂದು ಭಾವಿಸಿತ್ತು. ಆ ಭಾವನೆಯೊಂದಿಗೇನೇ ಆ ಕಾಲುದಾರಿ ಬಿಟ್ಟು ಸೀದಾ ಹೊಲದೊಳಕ್ಕೆ ಕಾಲಿಟ್ಟಿತು ಅದು. ಹರೆಯದ ಕುದುರೆ ಮರಿಯಂತೆ ಉಲ್ಲಾಸದಿಂದ ಕುಣಿ ಕುಣಿಯುತ್ತಾ ಬಹು ದೂರದ ಹೊಲಗಳಿಂದ ಸೋಕಿ ಹೊತ್ತು ತಂದ ಪರಿಮಳಯುಕ್ತ ಸುವಾಸನೆಯೊಂದಿಗೆ ರೊಯ್ಯಂದು ಬೀಸುವ ಗಾಳಿಯ